ಓ.ಎಸ್. ನಂಃ **33/2023**
<u>ಪಿಡಬ್ಲ್ಯೂಃ **2**</u>

ದಿನಾಂಕಃ 21-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ ಬಿ ಪಿ ಹೆಚ್ ವಕೀಲರಿಂದಃ</u>

ನಮ್ಮ ಜಮೀನಿನ ಸರ್ವೆ ನಂ.32 ಇರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಈ ದಾವೆ ದಾಖಲು ಮಾಡಿರುತ್ತೇನೆ. ಈ ದಾವೆ ಹಾಕಿರುವ ಬಗ್ಗೆ ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.32 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದರೆ ಸಾಕ್ಷಿಯು ನಾನು ಕಾಗದ ಪತ್ರ ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ನಾವು ಮೂರು ಪಾಲು ಮಾಡಿಕೊಂಡಿದ್ದೇವೆ. ನಮಗೆ ತಲಾ 17 ಎಕರೆ ಜಮೀನು ಬಂದಿರುತ್ತದೆ.

2. ಈ ದಾವೆಯನ್ನು ಹಣಮಂತರವರ ವಿರುದ್ಧ ದಾಖಲಿಸಿದ್ದೇನೆ. ನಮ್ಮ ಜಮೀನಿನ ಪೂರ್ವಕ್ಕೆ ಗುಂಡೆ ಮಲ್ಲಪ್ಪ ರವರ ಜಮೀನು, ಪಶ್ಚಿಮಕ್ಕೆ ಬೇಡರ ಜಮೀನು, ಉತ್ತರಕ್ಕೆ ಪ್ರತಿವಾದಿಯರ ಜಮೀನು ಹಾಗೂ ದಕ್ಷಿಣಕ್ಕೆ ಗೊಲ್ಲರ ಜಮೀನು ಇದೆ. ನನ್ನ ಪಾಲಿಗೆ ಬಂದಿರುವ ಜಮೀನಿನ ಪೂರ್ವಕ್ಕೆ ಗುಂಡೆ ಮಲ್ಲಪ್ಪ ರವರ ಜಮೀನು, ಪಶ್ಚಿಮಕ್ಕೆ ಗೊಲ್ಲರ ಲಕ್ಷ್ಮಣ ರವರ ಜಮೀನು, ಉತ್ತರಕ್ಕೆಪ್ರತಿವಾದಿಯರ ಜಮೀನು ಇದೆ.

3. ಸರ್ವೆ ನಂ.36 ರ ಜಮೀನು ಪ್ರತಿವಾದಿಯರಿಗೆ ಸೇರಿರುತ್ತದೆ ಎಂದರೆ ಸರಿ. ಅದು ಪ್ರತಿವಾದಿಯರ ಹಿರಿಯ ಜಮೀನು ಆಗಿರುತ್ತದೆ ಎಂದರೆ ಸರಿ. ಪ್ರಡಾದಿಯರು ತಮ್ಮ ಜಮೀನಿನಲ್ಲಿ ನಾಲ್ಕು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ವಿಭಾಗದ ಪ್ರಕಾರ ಪ್ರತಿವಾದಿಯರ ಹೆಸರಿಗೆ ಪ್ರತ್ಯೇಕ ಪಹಣಿ ಆಗಿದ್ದಾವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಮ್ಮ ಹಾಗೂ ಪ್ರತಿವಾದಿಯರ ಜಮೀನು ಒಂದಕ್ಕೊಂದು ಹೊಂದಿಕೊಂಡಿವೆ ಎಂದರೆ ಸರಿ. ನಮ್ಮ ಜಮೀನಿನ ಉತ್ತರಕ್ಕೆಪ್ರತಿವಾದಿಯರ ಜಮೀನು ಇದೆ ಎಂದರೆ ಸರಿ. ಕೆಲವು ದಿನಗಳ ಹಿಂದೆ ನಾವು ಪ್ರತಿವಾದಿಯರ ಜಮೀನನ್ನು ಒತ್ತುವರಿ ಮಾಡಿದ್ದೆವು ಎಂದರೆ ಸರಿಯಲ್ಲ. ಆಗ ಪ್ರತಿವಾದಿಯರು ತಮ್ಮ ಜಮೀನು ಹದ್ದುಬಸ್ತ್ ಗುರುತಿಸಲು ಅರ್ಜಿ ನೀಡಿದ್ದರು ಎಂದರೆ ಸರಿ. ಆ ಪ್ರಕಾರ ಭೂಮಾಪಕರು ಸ್ಥಳಕ್ಕೆ ಬಂದು ಹದ್ದುಬಸ್ತ ಗುರುತಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವುಗಳು ಪ್ರತಿವಾದಿಯರ 23 ಗುಂಟೆ ಜಮೀನು ಒತ್ತುವರಿ ಮಾಡಿದ್ದೇವೆ ಎಂದು ಭೂ ಮಾಪಕರು ವರದಿ ಸಲ್ಲಿಸಿದ್ದರು ಎಂದರೆ ಸರಿ. ನಂತರ ಹಿರಿಯರ

ಸಮಕ್ಷಮ ಪಂಚಾಯಿತಿ ಆಗಿದ್ದು ಹಿರಿಯರು ಹೇಳಿದಂತೆ ನೀವು ಪ್ರತಿವಾದಿಯರಿಗೆ ಒತ್ತುವರಿ ಮಾಡಿದ್ದ ಜಮೀನು ಬಿಟ್ಟು ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಅವರ ಜಮೀನು ಅವರು ಉಳುಮೆ ಮಾಡುತ್ತಿದ್ದಾರೆ ಹಾಗೂ ನಮ್ಮ ಜಮೀನು ನಾವು ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

4. ಪ್ರತಿವಾದಿಯರು ನಿಮ್ಮ ಸ್ವಾಧೀನಕ್ಕೆ ಯಾವ ದಿನಾಂಕದಂದು ತೊಂದರೆ ನೀಡಿದ್ದಾರೆ ಎಂದರೆ ಸಾಕ್ಷಿಯು ಹಿಂದ ತೊಂದರೆ ನೀಡಿಲ್ಲ, ಈಗ ತೊಂದರೆ ನೀಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿದ್ದ ಒತ್ತುವರಿ ಜಮೀನನ್ನು ನಾವು ಈ ದಾವೆಯಲ್ಲಿ ಏಪಕ್ಷಿಯ ತಡೆಯಾಜ್ಞೆ ಪಡೆದುಕೊಂಡ ನಂತರ ದಿನಾಂಕ 20.06.2023 ರಂದು ಮತ್ತೆ ಕಬಳಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ದಕ್ಷಿಣ ಭಾಗದ 05 ಗುಂಟೆ ಜಮೀನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಹಿರಿಯರು ಹೇಳಿದರೂ ಸಹ ನಾವು ಒತ್ತುವರಿ ಮಾಡಿದ ಜಮಿನು ಬಿಟ್ಟುಕೊಡುತ್ತಿಲ್ಲ ಎಂದರೆ ಸರಿಯಲ್ಲ. ನಾವು ತಡೆಯಾಜ್ಞೆ ಆದೇಶದ ದುರುಪಯೋಗ ಪಡಿಸಿಕೊಂಡು ಪ್ರತಿವಾದಿಯರ ಜಮಿನು ಮರಳಿ ಕಬಳಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ನಮಗೆ ಯಾವುದೇ ತೊಂದರೆ ನೀಡದಿದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

5. ಸಾಯಬಣ್ಣ ತಂದೆ ಭೀಮರಾಯ ಕಾಕಲವಾರ ರವರ ತಮ್ಮ ಪಾಲಿನ ಎಲ್ಲಾ ಜಮೀನನ್ನು ವಿಜಯಕುಮಾರ್ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈಗ ಸಾಯಬಣ್ಣ ರವರ ಜಮೀನನ್ನು ವಿಜಯಕುಮಾರ್ ರವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಹಿ/-

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ